ಕನ್ನಡ ಪೋಸ್ಟ್
ಇದು ಸುದ್ದಿ ವಿಳಾಸ
ಸಂಪಾದಕ : ಮಂಜು ಬನವಾಸೆ
KANNADA POST
ಕನ್ನಡ ದಿನ ಪತ್ರಿಕೆ Kannada Daily
ಹಾಸನ E-mail : kannadapostnews@gmail.com / ಕನ್ನಡ post Price: ₹1
Vol.No.01 | Issue. 155 | Pages. 2 | Date: 24-04-2025, THURSDAY RNI NO: KARKAN/2024/89601
ಸಂಪುಟ : 01 - ಸಂಚಿಕೆ : 155 - ಪುಟಗಳು : 2 - 24 ಏಪ್ರಿಲ್ 2025 ಗುರುವಾರ Ph: 8762954248 ದರ : ₹1

# ನಗರಪಾಲಿಕೆ: ಹೊಸ ಹಳ್ಳಿಗಳ ಅಭಿವೃದ್ಧಿಗೆ 30 ಕೋಟಿ ರೂ.

## ನಗರಪಾಲಿಕೆಗೆ ಸೇರಿದ ಹಳ್ಳಿಗಳ ಅಭಿವೃದ್ಧಿ ಪ್ರಸ್ತಾವನೆ ಸಲ್ಲಿಕೆಗೆ ಸೂಚನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಹಾಸನ ನಗರಸಭೆಯನ್ನು ಮಹಾನಗರಪಾಲಿಕೆಯಾಗಿ ಮೇಲ್ದರ್ಜೆಗೇರಿಸಿದ ಬಳಿಕ ಹೊಸದಾಗಿ ಸೇರ್ಪಡೆಯಾಗಿರುವ 25 ಗ್ರಾಮಗಳಿಗೆ ಅಗತ್ಯ ಮೂಲಭೂತ ಸೌಕರ್ಯ ಕಲ್ಪಿಸಲು ವಿಶೇಷ ಅನುದಾನದಡಿ 30 ಕೋಟಿ ರೂ. ಬಿಡುಗಡೆ ಮಾಡಲು, ಪರಿಶೀಲಿಸಿ ಪ್ರಸ್ತಾವನೆ ಸಲ್ಲಿಸುವಂತೆ ಪೌರಾಡಳಿತ ಇಲಾಖೆ, ಜಿಲ್ಲಾಧಿಕಾರಿ ಅವರಿಗೆ ಕೋರಿದೆ.

ನಗರಸಭೆಯನ್ನು ನಗರಪಾಲಿಕೆಯಾಗಿ ಮೇಲ್ದರ್ಜೆಗೇರಿಸುವ ಮುನ್ನ ನಗರದ ಸುತ್ತಮುತ್ತಲಿನ ಬೂವನಹಳ್ಳಿ, ಸತ್ಯಮಂಗಲ, ಹರಳಹಳ್ಳಿ, ದೊಡ್ಡ ಹೊನ್ನೇನಹಳ್ಳಿ, ಯಡಿಯೂರು, ಚಿಕ್ಕ ಹೊನ್ನೇಹಳ್ಳಿ, ಎಸ್.ಎಂ.ಕೃಷ್ಣ ನಗರ, ಬಿ.ಟಿ.ಕೊಪ್ಪಲು, ವಿಜಯನಗರ ಬಡಾವಣೆ, ಗವೇನಹಳ್ಳಿ, ಗುಡ್ಡೇನಹಳ್ಳಿ, ದೇವರಾಯಪಟ್ಟಣ, ಬಿಟ್ಟಗೋಡನಹಳ್ಳಿ, ಸಂಕಲಾಪುರ, ಸೇರಿದಂತೆ 25 ಗ್ರಾಮಗಳನ್ನು ನಗರಪಾಲಿಕೆಗೆ ಸೇರಿಸಲಾಗಿತ್ತು.




ಈ ಗ್ರಾಮಗಳಿಗೆ ವಿವಿಧ ಮೂಲಭೂತ ಸೌಕರ್ಯಗಳ ಅಗತ್ಯವಿರುವುದರಿಂದ ವಿಶೇಷ ಅನುದಾನದಡಿ 30 ಕೋಟಿ ರೂ. ಅನುದಾನ ಬಿಡುಗಡೆ ಮಾಡಿಸಿಕೊಡುವಂತೆ ಸ್ಥಳೀಯ ಶಾಸಕ ಹೆಚ್.ಪಿ.ಸ್ವರೂಪ್ ಪ್ರಕಾಶ್, ಮಾಜಿ ಪ್ರಧಾನಿ ಹಾಗೂ ರಾಜ್ಯಸಭಾ ಸದಸ್ಯರಾದ ಹೆಚ್.ಡಿ.ದೇವೇಗೌಡರಿಗೆ ಪತ್ರ ಬರೆದಿದ್ದರು.

25 ಹಳ್ಳಿಗಳಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು 30 ಕೋಟಿ ಅನುದಾನವನ್ನು ಪೌರಾಡಳಿತ ಇಲಾಖೆಯಿಂದ ವಿಶೇಷ ಅನುದಾನದಡಿ ಬಿಡುಗಡೆ ಮಾಡಿಸಿಕೊಡಬೇಕೆಂಬುದು 2023 ಡಿ.7 ರಂದು ದೇವೇಗೌಡರಿಗೆ ಶಾಸಕರು ಪತ್ರ ಬರೆದಿದ್ದರು.

ಈ ಪತ್ರ ಆಧರಿಸಿ 30 ಕೋಟಿ ರೂ.ಗಳನ್ನು ನಗರಾಭಿವೃದ್ಧಿ ಇಲಾಖೆಯಿಂದ ಆದ್ಯತೆ ಮೇರೆಗೆ ವಿಶೇಷ ಅನುದಾನದಡಿಯಲ್ಲಿ ಹಣ ಬಿಡುಗಡೆ ಮಾಡಬೇಕೆಂದು ದೇವೇಗೌಡರು 2023 ಡಿ.10 ರಂದು ಸಿಎಂ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದರು. ಜೊತೆಗೆ ಸ್ವರೂಪ್ ಪ್ರಕಾಶ್ ಅವರು ತಮಗೆ ಬರೆದಿದ್ದ ಪತ್ರವನ್ನೂ ಸೇರ್ಪಡೆ ಮಾಡಿದ್ದರು.

ಈ ಪತ್ರಗಳನ್ನು ಆಧರಿಸಿ, 2025 ಜ.9 ರಂದು ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕರು ಹಾಸನ ಡಿಸಿ ಸಿ.ಸತ್ಯಭಾಮ ಅವರಿಗೆ ಪತ್ರ ಬರೆದು, ಮಾಜಿ ಪ್ರಧಾನಿ ದೇವೇಗೌಡರ ಕೋರಿಕೆ, ಸದರಿ ಪ್ರಸ್ತಾವನೆಯನ್ನು ನಿಯಮಾನುಸಾರ ಪರಿಶೀಲಿಸಿ ಸ್ಪಷ್ಟ ಅಭಿಪ್ರಾಯದೊಂದಿಗೆ ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಿದೆ.

ಇದಾದ ಬಳಿಕ ನಗರಸಭೆ ಪೌರಾಯುಕ್ತರಿಗೆ 2025 ಜ.31 ರಂದು ನಿರ್ದೇಶನ ನೀಡಿರುವ ಡಿಸಿ ಅವರು, ನಗರಪಾಲಿಕೆಗೆ ಸೇರ್ಪಡೆಯಾಗಿರುವ 25 ಹಳ್ಳಿಗಳ ವಾರ್ಡ್ ಅಭಿವೃದ್ಧಿಗೆ 30 ಕೋಟಿ ಮಂಜೂರು ಮಾಡುವಂತೆ ಮಾಜಿ ಪ್ರಧಾನ ಮಂತ್ರಿಗಳು ಹಾಗೂ ಸ್ಥಳೀಯ ಶಾಸಕರು ಸರ್ಕಾರಕ್ಕೆ ಪತ್ರ ಬರೆದಿದ್ದಾರೆ.

ಈ ಪತ್ರಗಳ ಪ್ರಸ್ತಾವನೆಯನ್ನು ನಿಯಮಾನುಸಾರ ಪರಿಶೀಲಿಸಿ ಸ್ಪಷ್ಟ ಅಭಿಪ್ರಾಯದೊಂದಿಗೆ ಪ್ರಸ್ತಾವನೆ ಸಲ್ಲಿಸುವಂತೆ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿಗಳು, ಪೌರಾಡಳಿತ ನಿರ್ದೇಶನಾಲಯಕ್ಕೆ ಸೂಚನೆ ನೀಡಿದ್ದಾರೆ.

ಅದರಂತೆ ನಗರಸಭೆ ವ್ಯಾಪ್ತಿಯ 25 ಗ್ರಾಮಗಳ ವಾರ್ಡ್‌ಗಳ ಅಭಿವೃದ್ಧಿಗೆ 30 ಕೋಟಿ ರೂ.ಗಳನ್ನು ಮಂಜೂರು ಮಾಡುವ ಬಗ್ಗೆ ನಿಯಮಾನುಸಾರ ಅವಶ್ಯಕ ಪ್ರಸ್ತಾವನೆ ಸಲ್ಲಿಸುವಂತೆ ಜಿಲ್ಲಾಧಿಕಾರಿ ಅವರು, ನಗರಸಭೆ ಪೌರಾಯುಕ್ತರಿಗೆ ಸೂಚಿಸಿದ್ದಾರೆ.


## ಮಳೆ ಹಾನಿ: ಕೆಎಂಶಿ ಭೇಟಿ



ಅರಸೀಕೆರೆ: ಸೋಮವಾರ ರಾತ್ರಿ ಸುರಿದ ಗಾಳಿ ಮಳೆಗೆ ತಾಲೂಕಿನ ಬೆಳಗುಂಬ ಪಂಚಾಯಿತಿ ವ್ಯಾಪ್ತಿಯ ಬಸವನಹಟ್ಟಿ, ಕಲ್ಕೆರೆ, ಬೆಳಗುಂಬ ಹಾಗೂ ನಾಗೇನಹಳ್ಳಿ ಗ್ರಾಮಗಳ ಕೆಲ ಮನೆಗಳು ಹಾನಿಗೊಳಗಾಗಿವೆ. ನೂರಾರು ತೆಂಗಿನ ಮರಗಳು ಬುಡ ಮೇಲಾಗಿವೆ. ಈ ಹಿನ್ನೆಲೆ ಇಂದು ಸ್ಥಳೀಯ ಶಾಸಕರೂ ಆದ ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷ ಕೆ.ಎಂ.ಶಿವಲಿಂಗೇಗೌಡ ಅವರು ತಹಸೀಲ್ದಾರ್ ಸಂತೋಷ್, ತೋಟಗಾರಿಕೆ, ಸೆಸ್ಕಾಂ ಅಧಿಕಾರೊಗಳೊಂದಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಈ ವೇಳೆ ಮಾತನಾಡಿದ ಶಾಸಕರು, ಸರ್ಕಾರದಿಂದ ಸೂಕ್ತ ಪರಿಹಾರ ಕೊಡಿಸುವ ಭರವಸೆ ನೀಡಿದರು. ಸ್ಥಳೀಯ ಗ್ರಾಪಂ ಅಧ್ಯಕ್ಷ ವೇದಮೂರ್ತಿ, ಮಾಜಿ ಅಧ್ಯಕ್ಷ ತೋಂಟರಾಧ್ಯ, ಬಾಬು, ಸಿದ್ದಯ್ಯ, ಜಯಣ್ಣ, ಸ್ವಾಮಿ, ರವಿ ಹಾಗೂ ಗ್ರಾಮಸ್ಥರು ಇದ್ದರು.

## ಮಾರಿಯಮ್ಮ ದೇವಿ 39ನೇ ಜಾತ್ರೋತ್ಸವ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ನಗರದ ಹಳೆ ಗಾಣಿಗರ ಬೀದಿಯಲ್ಲಿ ನೆಲೆಸಿರುವ ಮಾರಿಯಮ್ಮ ದೇವಿಯ 39ನೇ ವರ್ಷದ ಜಾತ್ರಾ ಮಹೋತ್ಸವ ಯಶಸ್ವಿಯಾಗಿ ಜರುಗಿತು. ದೇವಸ್ಥಾನದ ಸಮಿತಿ ಅಧ್ಯಕ್ಷ ವಿಜಯ್ ಮಾತನಾಡಿ, ಕಳೆದ 39 ವರ್ಷಗಳಿಂದ ಜಾತ್ರಾ ಮಹೋತ್ಸವವನ್ನು ಯಶಸ್ವಿಯಾಗಿ ಸಮಾಜದ ಬಾಂಧವರೊಂದಿಗೆ ಆಚರಿಸಲಾಗುತ್ತಿದೆ ಎಂದರು.

ದೇವಸ್ಥಾನದ ಸ್ಥಳ ಚಿಕ್ಕದಾಗಿದ್ದು, ದೇವಸ್ಥಾನಕ್ಕೆ ಸ್ಥಳಾವಕಾಶ ಕೋರಿ ಹಲವಾರು ಬಾರಿ ನಗರಸಭೆಗೆ, ಸಂಬಂಧಪಟ್ಟ ಇಲಾಖೆಗೆ,ಶಾಸಕರಿಗೆ ಮನವಿ ಸಲ್ಲಿಸಿದರು ಇಲ್ಲಿಯವರೆಗೂ ದೇವಸ್ಥಾನದ ಅಭಿವೃದ್ಧಿಗೆ ಸಹಕರಿಸಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸವಿತಾ ಸಮಾಜದ ಉಪಾಧ್ಯಕ್ಷ ಮಾವಳ್ಳಿ ಕೃಷ್ಣ, ಕರ್ನಾಟಕ ರಾಜ್ಯ ಸವಿತಾ ಜಾಗೃತಿ ವೇದಿಕೆ ಅಧ್ಯಕ್ಷ ಬೈಲಪ್ಪ ನಾರಾಯಣಸ್ವಾಮಿ, ತುಮಕೂರು ಜಿಲ್ಲಾ ಸವಿತಾ ಸಮಾಜದ ಅಧ್ಯಕ್ಷ ಮಂಜೇಶ್ ಗಾಂಧಿ, ಮಧುಗಿರಿ ತಾಲೂಕು ಸವಿತಾ ಸಮಾಜ ಸಹಕಾರ ಸಂಘದ ಅಧ್ಯಕ್ಷ ಟಿ.ಆರ್ ಶಿವಕುಮಾರ್, ಶಿರಾ ತಾಲೂಕು ಸವಿತಾ ಸಮಾಜದ ಅಧ್ಯಕ್ಷ ಕೃಷ್ಣಮೂರ್ತಿ ಪಾವಗಡ, ತಾಲೂಕು ಸವಿತಾ ಸಮಾಜದ ಮುಖಂಡರಾದ ಮಂಗಳವಾಡ ನಾಗರಾಜ್, ಹೊಸಕೋಟೆ ಮಹಿಳಾ ಮತ್ತು ಮಕ್ಕಳ ರಕ್ಷಣಾ ಸಮಿತಿ ಅಧ್ಯಕ್ಷರಾದ ಡಾ.ಲಕ್ಷ್ಮಿ ಜಿ, ತುಮಕೂರು ಜಿಲ್ಲಾ ಸವಿತಾ ಸಮಾಜದ ಪ್ರಧಾನ ಕಾರ್ಯದರ್ಶಿ ಪಾರ್ಥಸಾರಥಿ ಮತ್ತು ಬೇಲೂರು ತಾಲೂಕು ಸವಿತಾ ಸಮಾಜ ಸಹಕಾರ ಸಂಘದ ಅಧ್ಯಕ್ಷ ನರಸಿಂಹಸ್ವಾಮಿ ಅವರನ್ನು ಸನ್ಮಾನಿಸಲಾಯಿತು ಹಾಗೂ ಹಾಸನ ಜಿಲ್ಲೆಯ ಹಲವಾರು ಸಮಾಜದ ಮುಖಂಡರು ಉಪಸ್ಥಿದ್ದರು.

## ಏ.26 ಕ್ಕೆ ಸಂವಿಧಾನ ಸಂರಕ್ಷಕರ ಸಮಾವೇಶ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಸಂವಿಧಾನ ಸಂರಕ್ಷಕ ಪಡೆ ಹೆಸರಿನಲ್ಲಿ ದೇಶಪ್ರೇಮಿಗಳ ತಂಡ ಕಟ್ಟುವ ಪ್ರಕ್ರಿಯೆಗೆ ಏ.26 ರಂದು ದಾವಣಗೆರೆಯಲ್ಲಿ ಸಂವಿಧಾನ ಸಂರಕ್ಷಕರ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಸ್ವಾಗತ ಸಮಿತಿ ಹಾಗೂ ಎದ್ದೇಳು ಕರ್ನಾಟಕ ರಾಜ್ಯ ಸಮಿತಿ ಸದಸ್ಯ ಗೌಸ್ ಮೊಹಿಯುದ್ದೀನ್ ತಿಳಿಸಿದರು.

ಸುದ್ದಿಗೋಷ್ಟಿಯಲ್ಲಿ ಮಾತನಾಡಿ, ದೇಶ ಇಂದು ಅಪಾಯಕಾರಿ ದಿಕ್ಕಿನಲ್ಲಿ ಸಾಗುತ್ತಿದೆ. ಸಂವಿಧಾನದ ಆಶಯಗಳನ್ನು ಬುಡಮೇಲು ಮಾಡಲಾಗುತ್ತಿದೆ. ಕೇಂದ್ರ ಸರ್ಕಾರ ಕಾರ್ಪೋರೇಟ್ ಹಾಗೂ ಮನುವಾದಿ ಶಕ್ತಿಗಳ ಸಂಯುಕ್ತ ಮಾಫಿಯಾ ರೀತಿ ಕೆಲಸ ಮಾಡುತ್ತಿದೆ.

ಹಿಟ್ಲರ್ ತಂತ್ರಗಾರಿಕೆಯನ್ನು ದೇಶದಲ್ಲಿ ಪ್ರಯೋಗಿಸಲಾಗುತ್ತಿದೆ. ಅಧಿಕಾರಕ್ಕೆ ಬರಲು ದೇಶವನ್ನು ಧರ್ಮ ಮತ್ತು ಜಾತಿಗಳ ಆಧಾರದ ಮೇಲೆ ಛಿದ್ರಗೊಳಿಸಲಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು.




ಯುವಜನರನ್ನು ಧರ್ಮಾಂಧರನ್ನಾಗಿಸಿ ನೆತ್ತರ ರಾಜಕಾರಣ ಪ್ರಚೋದಿಸಲಾಗುತ್ತಿದೆ. ವಿವಿಧ ವರ್ಗಗಳಿಗೆ ಸಂವಿಧಾನ ಕೊಟ್ಟಿದ್ದ ಹಕ್ಕುಗಳಿಗೆ ತದ್ವಿರುದ್ಧ ದಿಕ್ಕಿನಲ್ಲಿ ಕಾನೂನು ರೂಪಿಸಿ ತನ್ನ ಕಾರ್ಪೋರೇಟ್ ಬಳಗ ಬೆಳೆಸಲಾಗುತ್ತಿದೆ.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಸಹ ಕೊಟ್ಟ ಮಾತು ತಪ್ಪಿ, ಬಿಜೆಪಿ ನೀತಿಗಳನ್ನೇ ಮುಂದುವರೆಸುತ್ತಿದೆ. ಗ್ಯಾರಂಟಿಗಳಂತಹ ಕೆಲ ಜನಹಿತ ನೀತಿ ಬಿಟ್ಟರೆ ಕೇಂದ್ರ-ರಾಜ್ಯದ ಆಡಳಿತಕ್ಕೆ ವ್ಯತ್ಯಾಸ ಇಲ್ಲದಂತಾಗಿದೆ. ಈ ವೇಳೆ ಜನಹಿತ ಕಾಯಬೇಕಾದರೆ, ಈ ದೇಶ ಉಳಿಸಿಕೊಳ್ಳಬೇಕಾದರೆ, ಸಂವಿಧಾನ ಕೊಟ್ಟ ಹಕ್ಕುಗಳನ್ನು ಕಾಪಾಡಿಕೊಳ್ಳಬೇಕಾದರೆ ಜನಶಕ್ತಿಯನ್ನು ತಳಮಟ್ಟದಿಂದ ದೇಶ ಮಟ್ಟದ ತನಕ ಕಟ್ಟಬೇಕಿದೆ ಎಂದರು.

ಈ ಗುರಿಯೊಂದಿಗೆ ಪ್ರತಿ ಊರು, ಕೇರಿ, ಹಾಡಿ, ಬೀದಿಗಳಲ್ಲಿ, ಸಂವಿಧಾನ ಸಂರಕ್ಷಕ ಪಡೆ ಹೆಸರಿನಲ್ಲಿ ದೇಶಪ್ರೇಮಿ ತಂಡಗಳನ್ನು ಕಟ್ಟುವ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ. ಮುಂದಿನ ಮೂರು ವರ್ಷಗಳಲ್ಲಿ ಒಂದು ದಕ್ಷ ಕಾರ್ಯಕರ್ತರ ಪಡೆ ಸಜ್ಜುಗೊಳಿಸುವ ಗುರಿ ಇಟ್ಟುಕೊಳ್ಳಲಾಗಿದೆ.

ಈ ಪ್ರಕ್ರಿಯೆಗೆ ಚಾಲನೆ ನೀಡಲು 26 ರಂದು ದಾವಣಗೆರೆಯಲ್ಲಿ ಸಂವಿಧಾನ ಸಂರಕ್ಷಕರ ಸಮಾವೇಶ ಆಯೋಜಿಸಲಾಗುತ್ತಿದೆ ಎಂದರು.

ಸಮಾವೇಶದಲ್ಲಿ ಹತ್ತು ಸಾವಿರಕ್ಕೂ ಹೆಚ್ಚಿನ ಕಾರ್ಯಕರ್ತರು ಭಾಗವಹಿಸುವ ನಿರೀಕ್ಷೆ ಇದೆ. ಸಮಾವೇಶದಲ್ಲಿ ಹಿರಿಯ ಸಾಹಿತಿಗಳಾದ ಬರಗೂರು ರಾಮಚಂದ್ರಪ್ಪ, ಪ್ರಸಿದ್ಧ ಚಿತ್ರನಟ ಪ್ರಕಾಶ್ ರಾಜ್, ದಿಟ್ಟ ಹೋರಾಟಗಾರ್ತಿ ಮೇಧಾ ಪಾಟ್ಕರ್, ಆರ್ಥಿಕ ತಜ್ಞ ಪರಕಾಲ ಪ್ರಭಾಕರ್, ಖಾಸಿಮ್ ರಸೂಲ್ ಇಲಿಯಾಸ್, ಶಾಸಕ ಜಿಗ್ನೇಶ್ ಮೇವಾನಿ ಮೊದಲಾದವರು ಭಾಗಿಯಾಗುವರು ಎಂದರು. ಪತ್ರಿಕಾಗೋಷ್ಟಿಯಲ್ಲಿ ಸಮಿತಿ ಜಿಲ್ಲಾ ಸಂಚಾಲಕ ಕೆ.ಹೆಚ್. ಮುಹಮ್ಮದ್ ಮುಸ್ಲಿಯಾರ್, ಭೀಮ್ ಆರ್ಮಿ ಜಿಲ್ಲಾಧ್ಯಕ್ಷ ಹೆಚ್.ಎಸ್. ಪ್ರದೀಪ್, ಜೈ ಭೀಮ್ ಬ್ರಿಗೇಡ್ ಜಿಲ್ಲಾಧ್ಯಕ್ಷ ರಾಜೇಶ್, ನವೀನ್, ಕೃಷ್ಣಯ್ಯ ಇದ್ದರು.

## ನನ್ನನ್ನು ಬೆಂಬಲಿಸಿ: ಕೃಷ್ಣೇಗೌಡ ಮನವಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಕಲಗೂಡು: ಕ್ಷೇತ್ರದ ಅಭಿವೃದ್ಧಿಗಾಗಿ ಮುಂದಿನ ಚುನಾವಣೆಯಲ್ಲಿ ಮತದಾರರು ನನ್ನನ್ನು ಆಶೀರ್ವದಿಸಬೇಕು ಎಂದು ಕಾಂಗ್ರೆಸ್ ಮುಖಂಡ ಎಂ.ಟಿ. ಕೃಷ್ಣೇಗೌಡ ಮನವಿ ಮಾಡಿದರು.

ಪಟ್ಟಣದ ಲಕ್ಷ್ಮೀ ಕಲ್ಯಾಣ ಮಂಟಪದಲ್ಲಿ ತಮ್ಮ ಹುಟ್ಟು ಹಬ್ಬದ ಅಂಗವಾಗಿ ಅಭಿಮಾನಿ ಬಳಗ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಹಾಗೂ ಪೌರ ಕಾರ್ಮಿಕರಿಗೆ ಸಮವಸ್ತ್ರ ವಿತರಣಾ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದರು.

ಕಳೆದ 30 ವರ್ಷಗಳಿಂದ ಕ್ಷೇತ್ರದ ಅಭಿವೃದ್ಧಿ ಯಾವ ದಿಕ್ಕಿನಲ್ಲಿ ಸಾಗಿದೆ ಎಂಬುದು ಎಲ್ಲರಿಗೂ ಗೊತ್ತಿದೆ.



ಬದಲಾವಣೆ ದೃಷ್ಟಿಯಿಂದ ಮತದಾರರು ನನಗೆ ಬೆಂಬಲ ನೀಡಿ ಅಭಿವೃದ್ಧಿ ಪರ ರಾಜಕಾರಣಕ್ಕೆ ಕೈಜೋಡಿಸಬೇಕು. ಜನರು ನನ್ನ ಮೇಲಿಟ್ಟಿರುವ ಅಭಿಮಾನಕ್ಕೆ ಸದಾ ಋಣಿಯಾಗಿರುವುದಾಗಿ ತಿಳಿಸಿದರು.

ವಿಜ್ಞಾನಿ ಡಾ. ಕೋಮಲ್ ಕುಮಾರ್ ಮಾತನಾಡಿ, ವಿದೇಶದಲ್ಲಿ ಕ್ಯಾನ್ಸರ್ ಕಾಯಿಲೆ ತಡೆಗೆ ಶಾಶ್ವತ ಲಸಿಕೆ ಹಾಗೂ ಜ್ವರ ಬ್ಯಾಕ್ಟೀರಿಯಾ ಇಲ್ಲವೇ ವೈರಸ್ ನಿಂದ ಬರುತ್ತದೆಯೇ ಎಂಬುದರ ಕುರಿತು ನಡೆಯುತ್ತಿರುವ ವೈದ್ಯಕೀಯ ಸಂಶೋಧನೆಯಲ್ಲಿ ನಮ್ಮ ತಂಡ ಯಶಸ್ಸು ಸಾಧಿಸಿದೆ ಎಂದರು.

ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿ ಚನ್ನಕೇಶವ ಮಾತನಾಡಿ, ಕೆಳ ಸಮುದಾಯವನ್ನು ಮೇಲೆತ್ತುವಲ್ಲಿ ಕೃಷ್ಣೇಗೌಡರ ಶ್ರಮ ಬಹಳಷ್ಟಿದೆ. ನನ್ನನ್ನು ಓದಿಸಿ ಕೆಎಎಸ್ ಮಾಡಿಸಲು ಶ್ರಮಿಸಿದ ಕೃಷ್ಣೇಗೌಡರು ನನಗೆ ದೈವದ ಸ್ವರೂಪ, ಜನ ಕಲ್ಯಾಣಕ್ಕಾಗಿ ತುಡಿತ ಹೊಂದಿರುವ ಇಂತಹ ಮಹಾನ್ ವ್ಯಕ್ತಿಗಳು ರಾಜಕೀಯವಾಗಿ ಏಳಿಗೆ ಕಾಣಬೇಕು ಎಂದು ಆಶಿಸಿದರು.

ಇದೇ ವೇಳೆ ಪೌರ ಕಾರ್ಮಿಕರಿಗೆ ಸಮವಸ್ತ್ರ ವಿತರಣೆ ಜೊತೆಗೆ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತ್ಯಧಿಕ ಅಂಕ ಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಧನ ಸಹಾಯ ಮಾಡಿ ಗೌರವಿಸಲಾಯಿತು. ರವೀಂದ್ರ, ರಾಮೇಗೌಡ, ಕಳ್ಳಿಮುದ್ದನಹಳ್ಳಿ ಲೋಕೇಶ್, ಬಸವನಹಳ್ಳಿ ಪರಮೇಶ್, ಎಂ.ಆರ್. ರಂಗಸ್ವಾಮಿ, ದೇವರಾಜೇಗೌಡ ಇದ್ದರು.

## ತಾಪಮಾನ ಏರಿಕೆ ಬಗ್ಗೆ ಇರಲಿ ಎಚ್ಚರ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ನಾವಿರುವ ಇಂದಿನ ಜಗತ್ತು ಕಳೆದ ಮೂರ್ನಾಲ್ಕು ವರ್ಷಗಳಿಂದ ತಬ್ಬಿಬ್ಬುಗೊಳಿಸುವ ರೀತಿಯಲ್ಲಿ ಒಂದೇ ಸಮನೆ ಬದಲಾವಣೆ ಆಗುತ್ತಿದ್ದು, ಇದಕ್ಕೆ ವಾತಾವರಣದಲ್ಲಿರಬೇಕಾದ ಅಗತ್ಯ ಪ್ರಮಾಣಕ್ಕಿಂತ ಹೆಚ್ಚಿಗೆ ಇಂಗಾಲವನ್ನು ನಾವು ಉತ್ಪಾದಿಸಿದ್ದೇ ಕಾರಣ ಎಂದು ವಿಜ್ಞಾನ ಬರಹಗಾರ ಕೆ.ಎಸ್. ರವಿಕುಮಾರ್ ತಿಳಿಸಿದರು.

ನಗರದ ಬಿಜಿವಿಎಸ್ ಕಚೇರಿಯಲ್ಲಿ ಆಯೋಜಿಸಿದ್ದ ಭೂಮಿ ಹುಟ್ಟಬ್ಬದಲ್ಲಿ ಹವಾಮಾನ ಬದಲಾವಣೆ ಹೇಗೆ ಎದುರಿಸುವುದು ಎಂಬ ಪಿಪಿಟಿ ಸಂವಾದದಲ್ಲಿ ವಿಷಯ ಮಂಡಿಸಿ ಮಾತನಾಡಿದರು.

ನಿಸರ್ಗ ತನ್ನ ಇರುವಿಕೆಯ ಸಹಜ ಲಕ್ಷಣಗಳನ್ನು ತೊರೆಯುತ್ತ ಅತಿರೇಕ ಎನ್ನಬಹುದಾದ ಬದಲಾವಣೆಗಳಿಗೆ ಸಿಲುಕಿದೆ. ಅತಿ ಮಳೆ, ಅತಿ ಮಂಜು, ಅತಿ ಚಳಿ, ಅತಿ ಬರ, ಅತಿ ತಾಪಮಾನ ಹೀಗೆ ಒಂದಲ್ಲ ಒಂದು ನಮ್ಮ ನಿತ್ಯ ಬದುಕಿಗೆ ಅತಿರೇಕ ಎಂದು ನಮಗರಿವಾಗದಷ್ಟು




ಸಹಜವೆಂಬಂತೆ ತಳುಕುಹಾಕಿಕೊಳ್ಳುತ್ತಿವೆ. ಬಿಸಿಯಲೆಗಳು ತರುವ ಆರೋಗ್ಯದ ತೊಡಕುಗಳ ಬಗ್ಗೆ ನಮಗೆ ತಿಳಿವು ಇರಬೇಕಾದುದು ಅಗತ್ಯ. ಬಿಸಿಯಲೆಗಳ ಹೊಡೆತಕ್ಕೆ ಸಿಲುಕಿದವರಲ್ಲಿ ರಕ್ತದೊತ್ತಡ ಏರುತ್ತದೆ. ಹೃದಯಾಘಾತದ ಸಾಧ್ಯತೆ ಹೆಚ್ಚುತ್ತದೆ, ಹೀಗಾಗಿ ಮುನ್ನೆಚ್ಚರಿಕೆ ಅಗತ್ಯ ಎಂದರು.

ನಮ್ಮ ದೇಹದ ತಾಪ ಹೊರಗಿನ ತಾಪದ ಏರಿಕೆಗೆ ಹೊಂದಿಕೆಯಾಗದೆ ಒಂದು ಹಂತದಲ್ಲಿ ನಮಗೆ ಶಾಕ್ ಆಗಬಹುದು. ಮುಖ್ಯ ಅಂಗಗಳು ಕೈಕೊಟ್ಟು ಕೋಮಾಕ್ಕೆ ಜಾರಬಹುದು. ದೇಹದ ನೀರೆಲ್ಲ ಬೇಗ ಬೇಗ ಬೆವರಾಗಿ ಹೊರಹರಿದು ನೀರಿನ ಕೊರತೆ ತೀವ್ರ ಕಾಡಬಹುದು. ಎಂದು ಎಚ್ಚರಿಸಿದರು.

ಇನ್ನೋರ್ವ ಸಂಪನೂಲ ವ್ಯಕ್ತಿ ಕ್ಲಿಯರಿನ್ ಸಂಸ್ಥೆಯ ನಿರ್ದೇಶಕ ಚಂದ್ರಶೇಖರ್ ಮಾತನಾಡಿ, ನಗರಗಳೀಗ ಬಿಸಿ ನಡುಗಡ್ಡೆಯಾಗುತ್ತಿವೆ. ಮನೆಗಳಲ್ಲೇ ಘನತ್ಯಾಜ್ಯ ನಿರ್ವಹಣೆ ಮಾಡಿ ಅಂಗಳ ಕೃಷಿ ಮಾಡುವ ಅಭ್ಯಾಸ ರೂಢಿಗತ ಮಾಡಿಕೊಳ್ಳಬೇಕು, ಮನೆ ಮುಂದೆ ಕನಿಷ್ಠ ಎರೆಡಾದರೂ ಗಿಡನೆಟ್ಟು ಉಳಿಸಬೇಕು, ತಾರಸಿ ಮನೆ ಬಿಸಿಯಾಗದಂತೆ ಶೇಡ್ ನಿರ್ಮಿಸಿಕೊಳ್ಳಬೇಕು, ನಗರದೊಳಗೆ ನೀರು ಶೇಖರಿಸುವ ಕೆರೆ ಅಥವಾ ಹೊಂಡದ ವ್ಯವಸ್ಥೆ ಕಡ್ಡಾಯ ಮಾಡಿಕೊಳ್ಳಲೇ ಬೇಕೆಂದರು.

ಭೂಮಿ ತಾಯಿಯ ಕೋಪ ಆರಿಸಲು ನಾವು ಊರನ್ನು ಸ್ವಚ್ಛವಾಗಿಡುವಲ್ಲಿ ಹಾಗೂ ಕೆರೆ-ಕಟ್ಟೆ ರಕ್ಷಿಸಲು ತೊಡಗಿಸಿಕೊಳ್ಳಲೇ ಬೇಕು ಎಂದು ತಿಳಿಸಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ವಿಶ್ವಪಥ ಚಾನೆಲ್‌ನ ಪ್ರಧಾನ ಸಂಪಾದಕ ಆರ್.ಪಿ.ವೆಂಕಟೇಶಮೂರ್ತಿ, ಭೂತಾಪಮಾನವನ್ನು ಕಡಿಮೆ ಮಾಡಲು ಸಾಧ್ಯವಿಲ್ಲ. ಆದರೆ ಅದರ ಏರಿಕೆ ದರ ಹೆಚ್ಚಾಗದಂತೆ ನಿಯಂತ್ರಣ ಮಾಡಬಹುದು. ಅದಕ್ಕೆ ಬೇಕಾಗಿರುವುದು ರಾಜಕೀಯ ಇಚ್ಛಾಶಕ್ತಿ ಹಾಗೂ ಜನರ ಒತ್ತಡ ಎಂದರು.

ಬಿಜಿವಿಎಸ್-ಶಿಕ್ಷಣ ಉಪ ಸಮಿತಿ ಸಂಚಾಲಕಿ ಕೆ.ವಿ.ಕವಿತಾ ಪ್ರಸ್ತಾವನೆ ಮಾಡಿದರು. ಹಸಿರುಭೂಮಿ ಪ್ರತಿಷ್ಠಾನ, ರೆಡ್‌ಕ್ರಾಸ್, ಸ್ಕೌಟ್ ಅಂಡ್ ಗೈಡ್ಸ್, ಕೆ.ಪಿ.ಆರ್.ಎಸ್, ಸಿ.ಐ.ಟಿ.ಯು, ರೋಟರಿ-ಲಯನ್ಸ್, ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ, ಎಸ್.ಎಫ್.ಐ, ಡಿ.ವೈ.ಎಫ್.ಐ, ಚಿತ್ಕಲಾ ಫೌಂಡೇಶನ್, ಪ್ರತಿನಿಧಿಗಳು ಹಾಗೂ ಬಿಜಿವಿಎಸ್ ಜಿಲ್ಲಾ ಹಾಗೂ ತಾಲ್ಲೂಕಿನ ಸದಸ್ಯರು ಭಾಗವಹಿಸಿದ್ದರು.

## 7 ಲಕ್ಷದ ಚಿನ್ನ-ಬೆಳ್ಳಿ ಆಭರಣ : 1.60 ಲಕ್ಷ ರೂ. ನಗದು ಕಳವು

ಚನ್ನರಾಯಪಟ್ಟಣ: ಮನೆಯ ಬಾಗಿಲು ಮುರಿದು ಒಳ ನುಗ್ಗಿರುವ ಕಳ್ಳರು ಬೀರುವಿನಲ್ಲಿದ್ದ ಲಕ್ಷಾಂತರ ರೂ. ಮೌಲ್ಯದ ಬೆಳ್ಳಿಯ ವಸ್ತು ಹಾಗೂ ಚಿನ್ನಾಭರಣ ದೋಚಿ ಪರಾರಿಯಾಗಿರುವ ಘಟನೆ ಪಟ್ಟಣದ ನಾಗಸಮುದ್ರ ರಸ್ತೆಯಲ್ಲಿ ನಡೆದಿದೆ.

ಸ್ಥಳೀಯ ನಿವಾಸಿ ಬೇಬಿ ಮತ್ತವರ ಕುಟುಂಬದವರು ಏ.19 ರಂದು ಬೆಳಿಗ್ಗೆ ತೆರಣ್ಯ ಅಂಕನಹಳ್ಳಿ ಗ್ರಾಮದಲ್ಲಿ ಊರಿನ ಜಾತ್ರೆ ಇದ್ದ ಕಾರಣ ಮನೆಗೆ ಬೀಗ ಹಾಕಿಕೊಂಡು ಜಾತ್ರೆಗೆ ಹೋಗಿದ್ದರು.

ಜಾತ್ರೆ ಮುಗಿಸಿಕೊಂಡು ಏ.22 ರಂದು ಬೆಳಿಗ್ಗೆ ಮನೆಗೆ ಬಂದು ನೋಡಿದಾಗ ಕಳ್ಳತನ ನಡೆದಿರುವುದು ಗೊತ್ತಾಗಿದೆ. 500 ಗ್ರಾಂ ತೂಕದ ಒಂದು ಜೊತೆ ಬೆಳ್ಳಿಯ ದೀಪ, 500 ಗ್ರಾಂ ತೂಕದ 1 ಹೂವಿನ ಬುಟ್ಟಿ, 300 ಗ್ರಾಂ ತೂಕದ 1 ಬೆಳ್ಳಿಯ ತಟ್ಟೆ, 300 ಗ್ರಾಂ ತೂಕದ 1 ಬೆಳ್ಳಿಯ ಚೊಂಬು, 150 ಗ್ರಾಂ ತೂಕದ 3 ಬೆಳ್ಳಿಯ ಕುಂಕುಮದ ಬಟ್ಟಲು, 200 ಗ್ರಾಂ ತೂಕದ 1 ಬೆಳ್ಳಿಯ ತಟ್ಟೆ, 350 ಗ್ರಾಂ ತೂಕದ

2 ಬೆಳ್ಳಿಯ ಕಾಮಾಕ್ಷಿ ದೀಪ, 200 ಗ್ರಾಂ ತೂಕದ ಒಂದು ಜೊತೆ ತುಪ್ಪದ ದೀಪ, 100 ಗ್ರಾಂ ತೂಕದ ಒಂದು ಗಣಪತಿ ವಿಗ್ರಹ, 200 ಗ್ರಾಂ ತೂಕದ ಒಂದು ಕಳಸ, 150 ಗ್ರಾಂ ತೂಕದ 1 ಬೆಳ್ಳಿಯ ಘಂಟೆ, 100 ಗ್ರಾಂ ತೂಕದ 1 ಪಂಚಪಾತ್ರೆ, ಉದ್ದರಣೆ, 100 ಗ್ರಾಂ ತೂಕದ 2 ಜೊತೆ ಬೆಳ್ಳಿಯ ದೀಪಗಳು, 250 ಗ್ರಾಂ ತೂಕದ ಬೆಳ್ಳಿಯ ಆರತಿ ಸ್ಟ್ಯಾಂಡ್, 250 ಗ್ರಾಂ ತೂಕದ 2 ಬೆಳ್ಳಿಯ ಲೋಟ, 200 ಗ್ರಾಂ ತೂಕದ ಬೆಳ್ಳಿಯ ತೀರ್ಥದ ಬಟ್ಟಲು, 50 ಗ್ರಾಂ ತೂಕದ 1 ಗಂಧದ ಕಡ್ಡಿ ಸ್ಟ್ಯಾಂಡ್, 200 ಗ್ರಾಂ ತೂಕದ 3 ಜೊತೆ ಕಾಲುಗೆಜ್ಜೆ, 100 ಗ್ರಾಂ ತೂಕದ 2 ಕೈ ಬೆಳ್ಳಿ ಖಡ್ಗ ಸೇರಿ ಸುಮಾರು 4 ಕೆ.ಜಿ 200 ಗ್ರಾಂ.ನ ಅಂದಾಜು ಮೌಲ್ಯ 3.50 ಲಕ್ಷ ಮೌಲ್ಯದ ಬೆಳ್ಳಿಯ ಆಭರಣ ದೋಚಿದ್ದಾರೆ.

ಮಾತ್ರವಲ್ಲ 5 ಗ್ರಾಂ ತೂಕದ ಚಿನ್ನದ ತಾಳಿ, 5 ಗ್ರಾಂ ತೂಕದ ಚಿನ್ನದ ಓಲೆ, 3 ಗ್ರಾಂ ತೂಕದ ಚಿನ್ನದ ಉಂಗುರ ಸೇರಿ ಒಟ್ಟು 13 ಗ್ರಾಂ. ತೂಕದ ಸುಮಾರು 1 ಲಕ್ಷ ಬೆಲೆಬಾಳುವ ಚಿನ್ನಾಭರಣ ಜೊತೆಗೆ 15 ಸಾವಿರ ನಗದು ಕದ್ದು ಪರಾರಿಯಾಗಿದ್ದಾರೆ.

ಈ ಸಂಬಂಧ ನಗರಠಾಣೆಗೆ ದೂರು ನೀಡಲಾಗಿದೆ.

ಇದೇ ತಾಲೂಕಿನ ಅಯ್ಯರಹಳ್ಳಿ ಗ್ರಾಮದ ತಿರುಮಲೇಗೌಡ ಎಂಬುವರ ಮನೆಯ ಮೇಲ್ಭಾಗದ ಹೆಂಚು ತೆಗೆದು ಬೀರುವಿನಲ್ಲಿಟ್ಟಿದ್ದ 1.45 ಲಕ್ಷ ರೂ. ನಗದು ಕಳವು ಮಾಡಲಾಗಿದೆ. ಏ.22 ರಂದು ಮನೆಯಲ್ಲಿ ಯಾರೂ ಇಲ್ಲದ ವೇಳೆ ಈ ಕೃತ್ಯ ನಡೆದಿದ್ದು, ನುಗ್ಗೇಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಬೇಲೂರು ಬಸ್ ನಿಲ್ದಾಣದಲ್ಲಿ, ಬೆಂಗಳೂರಿಗೆ ಬಸ್ ಹತ್ತುತ್ತಿದ್ದ ಮಹಿಳೆಯ ವ್ಯಾನಿಟಿ ಬ್ಯಾಗ್‌ನಲ್ಲಿದ್ದ 50 ಗ್ರಾಂ ತೂಕದ ಚಿನ್ನಾಭರಣ ಕಳವು ಮಾಡಲಾಗಿದೆ.

ಯಶವಂತಪುರದ ರಾಣಿ ಎಂಬುವರು ತವರು ಮನೆಗೆ ಕೊತ್ತನಹಳ್ಳಿ ಗ್ರಾಮಕ್ಕೆ ಬಂದು ಏ.21 ರಂದು ಬೆಂಗಳೂರಿಗೆ ತೆರಳುವಾಗ ಈ ಕೃತ್ಯ ನಡೆದಿದೆ. 2 ಚಿನ್ನದ ಬಳೆ, 2 ಕತ್ತಿನ ಸರ, 2 ಜೊತೆ, 3 ಉಂಗುರಗಳ ಮೌಲ್ಯ 2.50 ಲಕ್ಷ ಎಂದು ಅಂದಾಜಿಸಲಾಗಿದೆ. ಸ್ಥಳೀಯ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಶಾಸಕ ಕೆಎಂಶಿಗೆ ಸನ್ಮಾನ




ಅರಸೀಕೆರೆ: ಇಂದು ನಗರದ ಶಾಸಕರ ಕಚೇರಿಯಲ್ಲಿ ಸಾರ್ವಜನಿಕರ ಭೇಟಿ ಸಮಯದಲ್ಲಿ ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷರು ಹಾಗೂ ಸ್ಥಳೀಯ ಶಾಸಕರಾದ ಕೆ.ಎಂ ಶಿವಲಿಂಗೇಗೌಡ ಅವರನ್ನು ಬಾಣಾವರ ಗ್ರಾಮದ ಶ್ರೀ ಬಾಣೇಶ್ವರ ವಾರ್ಷಿಕೋತ್ಸವಕ್ಕೆ ಆಹ್ವಾನಿಸಿದರು.

ಹಾಗೆಯೇ ದೇವಸ್ಥಾನದ ಕಾಂಕ್ರಿಟ್ ಹಾಗೂ ಹೈಮಾಸ್ಕ್ ಲೈಟ್ ಅಭಿರುದ್ದಿ ಕೆಲಸ ಮಾಡಿಸಿದಕ್ಕೆ ದೇವಸ್ಥಾನದ ಸಮಿತಿಯವರು ಇಂದು ಶಾಸಕರನ್ನು ಸನ್ಮಾನ ಮಾಡಿದರು. ಈ ಸಂದರ್ಭದಲ್ಲಿ ನಂಜುಂಡಸ್ವಾಮಿ, ಯೋಗೇಶ್, ವಿನಯ್, ಗಂಗಣ್ಣ. ಕೊಟ್ರೇಶ್, ಮುದ್ದ, ರವಿಶಂಕರ್. ಸುರೇಶ್.ಪ್ರಕಾಶ್. ಸೋಮಣ್ಣ. ಉಪಸ್ಥಿತರಿದ್ದರು

## ಪಹಲ್ಗಾಮ್ ಹತ್ಯಾಕಾಂಡ ಸಿಪಿಐಎಂ ಖಂಡನೆ

ಹಾಸನ: ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್ ನಲ್ಲಿ ಭಯೋತ್ಪಾದಕ ಶಕ್ತಿಗಳು ಪ್ರವಾಸಿಗಳನ್ನು ಕ್ರೂರವಾಗಿ ಹತ್ಯೆಮಾಡಿರುವ ಘಟನೆಯನ್ನು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಸಿಪಿಐಎಂ ತೀವ್ರವಾಗಿ ಖಂಡಿಸಿದೆ.

ದಾಳಿಯಲ್ಲಿ ಶಿವಮೊಗ್ಗದ ಮಂಜುನಾಥ್ ಹಾಗೂ ಬೆಂಗಳೂರಿನ ಭರತ್ ಭೂಷಣ್ ಸೇರಿದಂತೆ 28 ಜನ ಪ್ರವಾಸಿಗರನ್ನು ಬಲಿಪಡೆದಿರುವ ಈ ಕೃತ್ಯ ಅತ್ಯಂತ ಬರ್ಬರವಾಗಿದೆ. ದಾಳಿಯಲ್ಲಿ ಪ್ರಾಣ ಕಳೆದುಕೊಂಡ ನಿರಪರಾಧಿ ಕುಟುಂಬಗಳಿಗೆ ಸಿಪಿಐಎಂ ಸಂತಾಪ ವ್ಯಕ್ತಪಡಿಸಿದೆ.

ಈ ದಾಳಿಯಲ್ಲಿ ಗಾಯಗೊಂಡವರು ತ್ವರಿತವಾಗಿ ಚಿಕಿತ್ಸೆ ಪಡೆದು ಶೀಘ್ರ ಗುಣಮುಖರಾಗಲಿ.

ಪೊಲೀಸ್ ಮತ್ತು ಭದ್ರತಾ ಪಡೆಗಳನ್ನು ತನ್ನ ಅಧೀನದಲ್ಲಿಟ್ಟುಕೊಂಡಿರುವ ಕೇಂದ್ರ ಸರ್ಕಾರ ಈ ದುಷ್ಟ ದಾಳಿಗೆ ಕಾರಣರಾದ ಶಕ್ತಿಗಳನ್ನು ನ್ಯಾಯದ ಮುಂದೆ ಕರೆತರಲು ಎಲ್ಲಾ ಪ್ರಯತ್ನ ಮಾಡಬೇಕು ಮತ್ತು ಈ ಭಯಾನಕ ಕೃತ್ಯದಲ್ಲಿ ತೊಡಗಿರುವ ಅಪರಾಧಿಗಳನ್ನು ಬಂಧಿಸಿ ಕಠಿಣ ಶಿಕ್ಷೆಗೊಳಪಡಿಸಬೇಕು ಮತ್ತು ಪೊಲೀಸ್ ಭದ್ರತಾ ವೈಫಲ್ಯ ಹಾಗೂ ಗುಪ್ತಚರ ಇಲಾಖೆಯ ವೈಫಲ್ಯದ ಹೊಣೆಯನ್ನು ಕೇಂದ್ರ ಸರ್ಕಾರ ಹೊರಬೇಕು ಎಂದು ಆಗ್ರಹಿಸಿದೆ.

ಕನ್ನಡ ಪೋಸ್ಟ್

E-mail : kannadapostnews@gmail.com facebook.com / ಕನ್ನಡ post



# ಇಂದು ವರನಟ ಡಾ.ರಾಜ್ ಜನ್ಮದಿನ

## ಸಾಮಾಜಿಕ ಜವಾಬ್ದಾರಿಗೆ ಮಾದರಿ ನಮ್ಮ ಅಣ್ಣಾವ್ರು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಡಾ. ರಾಜಕುಮಾರ್ (ಅಣ್ಣಾವ್ರು) ಕನ್ನಡ ಚಿತ್ರರಂಗದ ನಟ ಮಾತ್ರವಲ್ಲ, ಸಮಾಜದ ಪ್ರತಿಯೊಬ್ಬ ನಾಗರಿಕನೂ ಪಾಲಿಸಿಕೊಂಡಿರಬೇಕಾದ ಜವಾಬ್ದಾರಿಗಳ ನೈಜ ಮಾದರಿಯೂ ಆಗಿದ್ದರು. ಅವರ ಜೀವನ ಶೈಲಿ, ನಡತೆ, ಹಾಗೂ ಸಮಾಜಕ್ಕೆ ನೀಡಿದ ಕೊಡುಗೆಗಳು ಕರ್ನಾಟಕದ ಸಾಂಸ್ಕೃತಿಕ ಮತ್ತು ಸಾಮಾಜಿಕ ಇತಿಹಾಸದಲ್ಲಿ ಮೈಲುಗಲ್ಲುಗಳಾಗಿವೆ.

**ಗೋಕಾಕ್ ಚಳವಳಿ ನಾಯಕತ್ವ**

1980ರ ದಶಕದಲ್ಲಿ ಗೋಕಾಕ್ ಚಳವಳಿ ಕನ್ನಡ ಭಾಷೆಗೆ ಶಿಕ್ಷಣದಲ್ಲಿ ಮೊದಲ ಆದ್ಯತೆ ನೀಡಬೇಕು ಎಂಬ ಗುರಿಯೊಂದಿಗೆ ಆರಂಭವಾಯಿತು.

ಪ್ರಾರಂಭದಲ್ಲಿ ಹೆಚ್ಚು ಗಮನ ಸೆಳೆಯದ ಈ ಚಳವಳಿಗೆ ಡಾ. ರಾಜಕುಮಾರ್ ಅವರು ಬೆಂಬಲ ನೀಡಿದಾಗ ದೊಡ್ಡಮಟ್ಟದಲ್ಲಿ ಜನಜಾಗೃತಿ ಸೃಷ್ಟಿಯಾಯಿತು.

ಅವರು ರಾಜ್ಯದಾದ್ಯಂತ ಯಾತ್ರೆ ನಡೆಸಿದಾಗ, ಸಾವಿರಾರು ಮಂದಿ ಚಳವಳಿಗೆ ಧುಮ್ಮಿಕ್ಕಿದರು.



ಅವರ ನಡೆ ಮತ್ತು ಮಾತುಗಳಿಂದ ಗೋಕಾಕ ಚಳವಳಿ ಯಶಸ್ಸು ಕಂಡಿತು, ಮತ್ತು ಕನ್ನಡ ಭಾಷೆಯನ್ನು ಶಾಲೆಗಳಲ್ಲಿ ಕಡ್ಡಾಯಗೊಳಿಸುವ ಅನಿವಾರ್ಯ ಸೃಷ್ಟಿಯಾಯಿತು.

**ದಾನ ಹಾಗೂ ಸಮಾಜಮುಖಿ ಕಾರ್ಯಗಳು**

**1. ಶಕ್ತಿಧಾಮ:**

2001ರಲ್ಲಿ ಅವರು ಶಕ್ತಿಧಾಮ ಸ್ಥಾಪಿಸಿದರು. ಇದು ಮಾದಕ ವ್ಯಸನ ಅಥವಾ ದೌರ್ಜನ್ಯದಿಂದ ಪಾರಾದ ಮಹಿಳೆಯರಿಗೆ ಆಶ್ರಯ ನೀಡುವ ಕೇಂದ್ರವಾಗಿದೆ.

**2.ನೇತ್ರ ದಾನ:**

1994ರಲ್ಲಿ ಅವರು ನೇತ್ರ ದಾನ ಮಾಡುವ ಪ್ರಮಾಣ ಸ್ವೀಕರಿಸಿದರು. ಅವರ ನಿಧನ ನಂತರ 2006ರಲ್ಲಿ ಈ ದಾನ ಸಾಧ್ಯವಾಯಿತು.

ಅಣ್ಣಾವ್ರ ಒಂದು ನಿರ್ಧಾರದಿಂದ ಕರ್ನಾಟಕದಲ್ಲಿ ನೇತ್ರ ದಾನ ಪ್ರಮಾಣ 400% ಹೆಚ್ಚಾಯಿತು.

**3. ನಿರ್ಗತಿಕರಿಗೆ ನೆರವು**

ರಾಜಕುಮಾರ್ ಸಂಗೀತ ಸಂಜೆಗಳಿಂದ ಸಂಗ್ರಹವಾದ ಹಣವನ್ನು ರಾಜ್ಯದ 21 ಜಿಲ್ಲೆಗಳಲ್ಲಿ ಕ್ರೀಡಾಂಗಣ ನಿರ್ಮಾಣಕ್ಕಾಗಿ ದಾನ ಮಾಡಿದರು.

ದಾದಾಸಾಹೇಬ ಫಾಲ್ಕೆ ಪ್ರಶಸ್ತಿ ಹಣವನ್ನು ಅವರು ಕನ್ನಡ ಸಾಹಿತ್ಯ ಪರಿಷತ್ತಿಗೆ ನೀಡಿದ್ದರು.

**ನೈತಿಕ ಬದುಕು ಮತ್ತು ಚಿತ್ರರಂಗದ ಸುಧಾರಣೆ**

ಡಾ. ರಾಜಕುಮಾರ್ ಅವರ ನಡತೆ ಅತ್ಯಂತ ನೈತಿಕವಾಗಿತ್ತು.

ಅವರು ಸಿನಿಮಾಗಳಲ್ಲಿ ಧೂಮಪಾನ, ಮದ್ಯಪಾನ ಅಥವಾ ನಿಂದನೀಯ ಪದಗಳನ್ನು ಬಳಸುವುದನ್ನು ಸಂಪೂರ್ಣ ನಿಷೇಧದಂತೆ ಪಾಲಿಸಿದರು.

ಸೆಟ್‌ನಲ್ಲಿ ಲೈಟ್ ಬಾಯ್ಸ್ ಗಳಿಗೆ ಊಟ ಸಿಗುತ್ತಿಲ್ಲ ಎಂಬುದನ್ನು ಅರಿತಾಗ, ಎಲ್ಲರಿಗೂ ಊಟ ಕಲ್ಪಿಸಬೇಕು ಎಂದು ತೀರ್ಮಾನಿಸಿದರು. ಇದರಿಂದ ಚಿತ್ರರಂಗದಲ್ಲಿ ಶ್ರಮಿಕರ ಹಕ್ಕುಗಳ ಕುರಿತ ನಿಟ್ಟಿನಲ್ಲಿ ದೊಡ್ಡ ಬದಲಾವಣೆ ಸಂಭವಿಸಿತು.

**ಸ್ಮರಣೀಯ ವೈಖರಿ**

ಅವರ ಜವಾಬ್ದಾರಿ ತುಂಬಿದ ನಡೆ, ಸೌಮ್ಯತೆ ಮತ್ತು ಜನರ ಪ್ರೀತಿಯಿಂದ ಅವರು ಎಲ್ಲರ ಹೃದಯದಲ್ಲಿ ನೆಲೆಸಿದ್ದಾರೆ. ಅವರು ಬಿತ್ತಿದ ಮೌಲ್ಯಗಳು, ಇಂದಿಗೂ ಹೊಸ ಪೀಳಿಗೆಗೆ ಪ್ರೇರಣೆಯಾಗಿ ನೀಡುತ್ತಿವೆ.

# ಎಸ್‌ಸಿ ವಿಭಾಗದ ಆಲೂರು ತಾ.ಬ್ಲಾಕ್ ಅಧ್ಯಕ್ಷರಾಗಿ ಸುರೇಶ್




ಹಾಸನ: ಜಿಲ್ಲಾ ಕಾಂಗ್ರೆಸ್ ಪರಿಶಿಷ್ಟ ಜಾತಿ ವಿಭಾಗದ ಆಲೂರು-ಸಕಲೇಶಪುರ ವಿಧಾನಸಭಾ ಕ್ಷೇತ್ರದ ಆಲೂರು ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷರನ್ನಾಗಿ ಹೆಚ್.ಸುರೇಶ್ ಅವರನ್ನು ನೇಮಕ ಮಾಡಲಾಗಿದೆ. ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ನೂತನ ಅಧ್ಯಕ್ಷರು, ತಮ್ಮ ಆಯ್ಕೆಗೆ ಕಾರಣರಾದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಸಿಎಂ ಸಿದ್ದರಾಮಯ್ಯ, ಉಸ್ತುವಾರಿ ಸಚಿವ ಕೆ.ಎನ್.ರಾಜಣ್ಣ, ಸಂಸದ ಶ್ರೇಯಸ್ ಪಟೇಲ್, ಜಿಲ್ಲಾಧ್ಯಕ್ಷ ಮಲ್ಲಿಗೆವಾಳು ದ್ಯಾವಪ್ಪ, ಸಕಲೇಶಪುರ ಕಾಂಗ್ರೆಸ್ ಮುಖಂಡ ಮುರುಳಿ ಮೋಹನ್ ಸೇರಿದಂತೆ ಜಿಲ್ಲೆಯ ಎಲ್ಲ ಮುಖಂಡರಿಗೂ ಧನ್ಯವಾದ ಹೇಳಿದರು. ತಕ್ಷಣದಿಂದ ಜಾರಿಗೆ ಬರುವಂತೆ ಜವಾಬ್ದಾರಿ ವಹಿಸಿಕೊಂಡು, ಕಾಂಗ್ರೆಸ್ ಪಕ್ಷದ ನೀತಿ, ನಿಯಮ ಮತ್ತು ಸಿದ್ಧಾಂತಗಳಿಗೆ ಬದ್ಧರಾಗಿ ಪಕ್ಷದ ಸಂಘಟನೆಯಲ್ಲಿ ತೊಡಗಿಸಿಕೊಳ್ಳುವುದಾಗಿ ಹೇಳಿದರು. ಕ್ಷೇತ್ರದಲ್ಲಿ ಕುಡಿಯುವ ನೀರು, ರಸ್ತೆ, ವಿದ್ಯುತ್ ಸಮಸ್ಯೆ ನಿವಾರಣೆಗೆ ಕೆಲಸ ಮಾಡುವುದಾಗಿ ತಿಳಿಸಿದರು. ನನ್ನ ಅಧಿಕಾರಾವಧಿಯಲ್ಲಿ ಜನಪರ ಕೆಲಸ ಮಾಡುವೆ, ಸರ್ಕಾರದ ಯೋಜನೆಗಳನ್ನು ಅರ್ಹರಿಗೆ ತಲುಪಿಸಲು ಶ್ರಮಿಸುವೆ ಎಂದು ತಿಳಿಸಿದರು.

# ಸಾಲ-ಫೈನಾನ್ಸ್ ಕಿರುಕುಳ ರೈತ ನೇಣಿಗೆ ಶರಣು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಫೈನಾನ್ಸ್ ನವರ ಕಿರುಕುಳ ಹಾಗೂ ಸಾಲಬಾಧೆ ತಾಳಲಾರದೆ ರೈತನೋರ್ವ ನೇಣಿಗೆ ಶರಣಾಗಿರುವ ಘಟನೆ ತಾಲೂಕಿನ ಜೋಡಿ ಮಲ್ಲಪ್ಪನಹಳ್ಳಿಯಲ್ಲಿ ನಡೆದಿದೆ. ವೆಂಕಟೇಗೌಡ (48) ಮೃತ ರೈತ.

ಫೈನಾನ್ಸ್ ಗಳಿಂದ 3 ಲಕ್ಷ 70 ಸಾವಿರ, ಬ್ಯಾಂಕ್, ವ್ಯವಸಾಯ ಸಹಕಾರ ಸಂಘ, ಧರ್ಮಸ್ಥಳ ಸಂಘ ಹಾಗೂ ಕೈ ಸಾಲ ಸೇರಿ

3 ಲಕ್ಷದ 90 ಸಾವಿರ ಸಾಲ ಮಾಡಿದ್ದರು. ಒಟ್ಟು 7 ಲಕ್ಷದ 60 ಸಾವಿರ ರೂ.ಸಾಲ ಇವರ ಮೇಲಿತ್ತು.

ಒಂದೆಡೆ ಬ್ಯಾಂಕ್ ಇತರೆ ಮೂಲಗಳಿಂದ ಸಾಲ, ಮತ್ತೊಂದೆಡೆ ಫೈನಾನ್ಸ್ ನವರು ಸಾಲ ಮರುಪಾವತಿ ಮಾಡುವಂತೆ ಕಿರುಕುಳ ನೀಡುತ್ತಿದ್ದರು ಎನ್ನಲಾಗಿದೆ. ಇದರಿಂದ ಬೇರೆ ದಾರಿ ಕಾಣದೆ ಮನನೊಂದು ಮನೆಯಲ್ಲಿಯೇ ನೇಣುಬಿಗಿದುಕೊಂಡು ವೆಂಕಟೇಗೌಡ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸ್ಥಳಕ್ಕೆ ಗೊರೂರು ಪೊಲೀಸರು ಭೇಟಿ ನೀಡಿ ಪರಿಶೀಲಿಸಿ ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿದ್ದಾರೆ.

# ಅವಿಶ್ವಾಸ ಮಂಡನೆ: ಏ.28 ರಂದು ಯಾರಿಗೆ ಮನ್ನಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರಸಭೆ ಅಧ್ಯಕ್ಷ ಎಂ.ಚಂದ್ರೇಗೌಡ ವಿರುದ್ಧ ಜೆಡಿಎಸ್ ಸದಸ್ಯರು ಅವಿಶ್ವಾಸ ನಿರ್ಣಯ ಮಂಡಿಸಿದ್ದು, ಬಲಾಬಲ ತಿಳಿದುಕೊಳ್ಳುವ ಗೊತ್ತುವಳಿ ಸಭೆ ಇದೇ ತಿಂಗಳ 28 ರಂದು ನಿಗದಿಯಾಗಿದೆ.

ಅಂದು ಯಾರ ಕೈ ಮೇಲಾಗಲಿದೆ, ಯಾರಿಗೆ ಸೋಲು, ಯಾರಿಗೆ ಗೆಲುವಾಗಲಿದೆ ಎಂಬ ಕುತೂಹಲ ಸಹಜವಾಗಿಯೇ ಎಲ್ಲರಲ್ಲೂ ಮನೆ ಮಾಡಿದೆ.

ನಗರಸಭೆಯ ಒಟ್ಟು 35 ಸದಸ್ಯ ಬಲದಲ್ಲಿ ಜೆಡಿಎಸ್ 17, ಬಿಜೆಪಿ 13, ಕಾಂಗ್ರೆಸ್ 2 ಮತ್ತು ಮೂವರು ಪಕ್ಷೇತರ ಸದಸ್ಯರಿದ್ದಾರೆ.

ಇವರಲ್ಲದೆ ಸಂಸದ ಶ್ರೇಯಸ್ ಪಟೇಲ್, ಶಾಸಕ ಹೆಚ್.ಪಿ.ಸ್ವರೂಪ್ ಪ್ರಕಾಶ್ ಮತ್ತು ವಿಧಾನ ಪರಿಷತ್ ಸದಸ್ಯ ಡಾ.ಸೂರಜ್ ರೇವಣ್ಣ ಅವರೂ ಅಗತ್ಯ ಬಿದ್ದರೆ ಮತ ಹಾಕಬಹುದಾಗಿದೆ. ಇದರಿಂದ ಒಟ್ಟು ಮತಗಳ ಸಂಖ್ಯೆ 38 ಇದೆ.

ಹಾಲಿ ಅಧ್ಯಕ್ಷರು ವಿಶ್ವಾಸ ಗೆಲ್ಲಲು 1/3 ಅಂದರೆ 13 ಸದಸ್ಯರ ಬೆಂಬಲ ಬೇಕು. ಜೆಡಿಎಸ್ ಅವಿಶ್ವಾಸ ಸಾಬೀತು ಪಡಿಸಲು 3/2 ಅಂದರೆ 26 ಸದಸ್ಯರ ಬೆಂಬಲ ಬೇಕು. ಇದಕ್ಕಾಗಿ ಕುರ್ಚಿ ಉಳಿಸಿಕೊಳ್ಳಲು ಚಂದ್ರೇಗೌಡ ಕಸರತ್ತು ನಡೆಸುತ್ತಿದ್ದರೆ, ತಮ್ಮ ವಿರುದ್ಧವೇ ನಿಂತಿರುವ

ಅಧ್ಯಕ್ಷರನ್ನು ಕೆಳಗಿಳಿಸಲು ಮಾಜಿ ಸಚಿವ ಹೆಚ್.ಡಿ.ರೇವಣ್ಣ, ಸ್ಥಳೀಯ ಶಾಸಕ ಹೆಚ್.ಪಿ.ಸ್ವರೂಪ್ ಪ್ರಕಾಶ್, ಎಂಎಲ್‌ಸಿ ಡಾ.ಸೂರಜ್ ರೇವಣ್ಣ ಪ್ರತಿಷ್ಠೆಯಾಗಿ ತೆಗೆದುಕೊಂಡು ಹಲವು ರೀತಿಯ ಕಾರ್ಯತಂತ್ರ ಹೆಣೆಯುತ್ತಿದ್ದಾರೆ.





## ಮನಸಿಲ್ಲದವರು ಗೈರು ಸಾಧ್ಯತೆ

ಮತ್ತೊಂದೆಡೆ ಜೆಡಿಎಸ್, ಬಿಜೆಪಿ, ಕಾಂಗ್ರೆಸ್ ಪಕ್ಷಗಳ ಚಿಹ್ನೆ ಅಡಿಯಲ್ಲಿ ಗೆದ್ದಿರುವ ಕೆಲವು ಸದಸ್ಯರಿಗೆ ಯಾರನ್ನು ಬೆಂಬಲಿಸುವುದು ಎಂಬ ಧರ್ಮ ಸಂಕಟಕ್ಕೆ ಸಿಲುಕಿದ್ದಾರೆ. ಇಂತಹ ಮನಸ್ಥಿತಿ ಮೂರೂ ಪಕ್ಷಗಳಲ್ಲೂ ಇದೆ ಎಂದು ತಿಳಿದು ಬಂದಿದೆ. ಸಂಸದರು ಹಾಗೂ ಕಾಂಗ್ರೆಸ್‌ನ ಇಬ್ಬರು ಸದಸ್ಯರ ನಡೆ ಗುಟ್ಟಾಗಿಯೇ ಇದೆ. ಬಿಜೆಪಿಯ ಎಲ್ಲ ಸದಸ್ಯರು ಚಂದ್ರೇಗೌಡರಿಗೆ ಜೈ ಎನ್ನುತ್ತಾರೆ ಅನ್ನುವ ಹಾಗಿಲ್ಲ.

ಹೀಗಾಗಿ ಕೆಲವರು ಅನಿವಾರ್ಯವಾಗಿ ಗೈರಾಗಲಿದ್ದಾರೆ ಎಂದು ಹೇಳಲಾಗುತ್ತಿದೆ. ಆದರೂ ಏ.28 ರವರೆಗೆ ಏನೆಲ್ಲ ಬೆಳವಣಿಗೆ ನಡೆಯಲಿವೆ, ಯಾರ ನಿಷ್ಠೆ ಯಾರ ಪರ ಬದಲಾಗಲಿದೆ ಎಂಬುದನ್ನು ಕಾದು ನೋಡಬೇಕಿದೆ.

## ಚಂದ್ರೇಗೌಡ ಬೆಂಬಲಿಸಲು ಸೂಚನೆ..?






ಈ ವಿಚಾರದಲ್ಲಿ ಬಿಜೆಪಿಯವರು ಸುಮ್ಮನೆ ಕುಳಿತಿಲ್ಲ. ಕೆಲ ದಿನಗಳ ಹಿಂದೆ ನಡೆದ ಉಪಾಧ್ಯಕ್ಷರ ಚುನಾವಣೆಯಲ್ಲಿ ಕಮಲ ಪಕ್ಷದ ಸದಸ್ಯರು, ಜೆಡಿಎಸ್ ಅಭ್ಯರ್ಥಿಯಾಗಿದ್ದ ಹೇಮಲತಾ ಕಮಲ್ ಕುಮಾರ್ ಅವರಿಗೆ ಬಹಿರಂಗವಾಗಿ ಬೆಂಬಲ ಘೋಷಣೆ ಮಾಡಿದ್ದರು.

ಅದರಂತೆ ನಿರಾಯಾಸವಾಗಿ, ಯಾವುದೇ ಗದ್ದಲ, ಗೊಂದಲ ಇಲ್ಲದೆ ಚುನಾವಣೆ ಪ್ರಕ್ರಿಯೆ ಮುಗಿದಿತ್ತು.

ಆದರೀಗ ಪರಿಸ್ಥಿತಿ ಭಿನ್ನವಾಗಿದೆ. ಜೆಡಿಎಸ್‌ನ ಬಹುತೇಕ ಸದಸ್ಯರು ಚಂದ್ರೇಗೌಡ ಅವರ ಪರವಾಗಿಲ್ಲ. ಈ ಸನ್ನಿವೇಶವನ್ನೇ ಬಳಕೆ ಮಾಡಿಕೊಂಡು ಬಿಜೆಪಿ ಸದಸ್ಯರಿಂದ ಬೆಂಬಲ ಕೊಡಿಸುವ ಮೂಲಕ ರೇವಣ್ಣ, ಸ್ವರೂಪ್ ಅವರಿಗೆ ಠಕ್ಕರ್ ಕೊಡಲು ಮಾಜಿ ಶಾಸಕ ಪ್ರೀತಂ ಜೆ.ಗೌಡ ಪ್ಲಾನ್ ಮಾಡಿದ್ದಾರೆ.

ಈ ಸಂಬಂಧ ಈಗಾಗಲೇ ಬಿಜೆಪಿ ಸದಸ್ಯರೊಂದಿಗೆ ಸಭೆ ನಡೆಸಿ ಚಂದ್ರೇಗೌಡ ಅವರನ್ನು ಬೆಂಬಿಸುವಂತೆ ಸೂಚನೆ ನೀಡಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.

ಆದರೆ ಎಲ್ಲ ಸದಸ್ಯರು ಇದನ್ನು ಪಾಲಿಸುವರೇ ಎಂಬುದು ಯಕ್ಷ ಪ್ರಶ್ನೆಯಾಗಿದೆ.

ನಾವೇ ಪಾಸ್ ಆಗ್ತೇವೆ: ಜೆಡಿಎಸ್ ನವರು ಹೇಳುವಂತೆ ನಮ್ಮ ಪಕ್ಷದ 17 ಸದಸ್ಯರಿದ್ದಾರೆ. ಬಿಜೆಪಿಯ ಇಬ್ಬರು ಸದಸ್ಯರು ನಮ್ಮನ್ನೇ ಬೆಂಬಲಿಸುವ ವಿಶ್ವಾಸ ಇದೆ. ಇಬ್ಬರು ಪಕ್ಷೇತರರು ನಮ್ಮ ಜೊತೆಗಿದ್ದಾರೆ. ಕಾಂಗ್ರೆಸ್‌ನವರ ನಿಲುವು ಏನೆಂಬುದು ಗೊತ್ತಿಲ್ಲ. ಹೀಗಾಗಿ ಅವಿಶ್ವಾಸ ನಿರ್ಣಯದಲ್ಲಿ ನಾವೇ ಪಾಸ್ ಆಗುತ್ತೇವೆ ಎಂದು ಹೇಳುತ್ತಿದ್ದಾರೆ. ಕೇವಲ ಬಿಜೆಪಿಯವರನ್ನೇ ನೆಚ್ಚಿಕೊಂಡು ಅವರು ವಿಶ್ವಾಸ ಸಾಬೀತು ಪಡಿಸಲಾರರು ಅನ್ನುತ್ತಿದ್ದಾರೆ.

ಸದಸ್ಯರ ಮೇಲೆ ವಿಶ್ವಾಸ ಇದೆ: ಆದರೆ ಚಂದ್ರೇಗೌಡರು, ಎಲ್ಲ ಸದಸ್ಯರೊಂದಿಗೂ ನಾನು ಚೆನ್ನಾಗಿದ್ದೇನೆ. ಪಕ್ಷಾತೀತವಾಗಿ ನಗರದ ಅಭಿವೃದ್ಧಿ ಮಾಡುತ್ತಿದ್ದೇನೆ. ಹಾಗಾಗಿ ಎಲ್ಲರ ಬೆಂಬಲವೂ ನನಗಿದೆ. ಸದಸ್ಯರ ವಿಶ್ವಾಸದಿಂದ ನಾನೇ ಗೆಲ್ಲಲಿದ್ದೇನೆ ಎಂದು ಹೇಳುತ್ತಿದ್ದಾರೆ.

# ವಾಕಿಂಗ್ ಮಾಡುತ್ತಿದ್ದ ವ್ಯಕ್ತಿ ಮೇಲೆ ಸಲಗ ದಾಳಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಶಾಶ್ವತ ಪರಿಹಾರದ ಭರವಸೆ ಒಂದೆಡೆಯಾದರೆ ಮತ್ತೊಂದೆಡೆ ಮಲೆನಾಡು ಭಾಗದಲ್ಲಿ ಕಾಡಾನೆಗಳ ಕಾಟ ನಿರಂತರವಾಗಿ ಮುಂದುವರಿದಿದೆ.

ಇಂದು ಬೆಳಗ್ಗೆ ವಾಯು ವಿಹಾರಕ್ಕೆ ತೆರಳಿದ್ದ ವ್ಯಕ್ತಿ ಮೇಲೆ ಏಕಾಏಕಿ ಒಂಟಿಸಲಗ ದಾಳಿ ಮಾಡಿ, . ಸೊಂಡಿಲಿನಿಂದ ಎತ್ತಿ ವೃದ್ಧನನ್ನು ಬಿಸಾಡಿದೆ. ಮಾತ್ರವಲ್ಲ ಕಾಲಿಂದ ತುಳಿದು ಜೀವ ತೆಗೆಯಲು ಪ್ರಯತ್ನ ಮಾಡಿದೆ.

ಸಕಲೇಶಪುರ ತಾಲ್ಲೂಕಿನ ಹೆಬ್ಬನಹಳ್ಳಿ ಗ್ರಾಮದಲ್ಲಿ ಈ ಘಟನೆ ನಡೆದಿದ್ದು, ಗ್ರಾಮದ ರಾಜು (68) ಎಂಬುವರು ಕಾಡಾನೆ ದಾಳಿಯಿಂದ ತೀವ್ರವಾಗಿ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ರಾಜು ಎಂದಿನಂತೆ ಬೆಳಗ್ಗೆ ಎದ್ದು ವಾಕಿಂಗ್ ಹೋಗುತ್ತಿದ್ದರು. ಈ ವೇಳೆ ದಿಢೀರ್ ಎಂಟ್ರಿಕೊಟ್ಟ ಕಾಡಾನೆ ವ್ಯಕ್ತಿಯ ಮೇಲೆ ಎರಗಿದೆ. ನೋಡ ನೋಡುತ್ತಿದ್ದಂತೆಯೇ ಸೊಂಡಿಲಲ್ಲಿ ಹಿಡಿದು ಅನತಿ ದೂರ ಎಸೆದ ನಂತರ ತಲೆ ಭಾಗವನ್ನು ತುಳಿದಿದೆ. ಈ ದೃಶ್ಯಾವಳಿ ಕಂಡ ಜನರು, ಒಟ್ಟಿಗೇ ಕಿರುಚಾಡಲು ಆರಂಭಿಸಿದರು.

ಈ ಕೂಗಾಟ ಕೇಳಿದ ಒಂಟಿಸಲಗ ಪಕ್ಕದ ಕಾಫಿ ತೋಟದೊಳಗೆ ಹೋಗಿದೆ. ಕೂಡಲೇ ಗ್ರಾಮಸ್ಥರು ಗಾಯಾಳುವನ್ನು ಸಕಲೇಶಪುರ ತಾಲ್ಲೂಕು ಆಸ್ಪತ್ರೆಗೆ ಕರೆದೊಯ್ದರು. ಕ್ರಾಫರ್ಡ್ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಪಡೆದು ಹೆಚ್ಚಿನ ಚಿಕಿತ್ಸೆ ಗಾಗಿ ಹಾಸನ ಜಿಲ್ಲಾಸ್ಪತ್ರೆಗೆ ರವಾನಿಸಲಾಗಿದೆ. ಸದ್ಯಕ್ಕೆ ಸಾವಿನ ದವಡೆಯಿಂದ ಪಾರಾಗಿರುವ ರಾಜು, ಇದೀಗ ಸಾವು-ನೋವಿನಿಂದ ಚಿಕಿತ್ಸೆ ಪಡೆಯುತ್ತಿದ್ದಾರೆ.

ಸ್ಥಳಕ್ಕೆ ಅರಣ್ಯ ಇಲಾಖೆ ಇಟಿಎಫ್ ಸಿಬ್ಬಂದಿ ದೌಡಾಯಿಸಿ,ಆನೆ ಮರಳಿ ಬರದಂತೆ ಗಮನ ಹರಿಸಿದ್ದಾರೆ. ಇತ್ತ ಅರಣ್ಯ ಇಲಾಖೆ ಅಧಿಕಾರಿಗಳು ಆಸ್ಪತ್ರೆಗೆ ಭೇಟಿ ನೀಡಿ ರಾಜು ಅವರ ಯೋಗ ಕ್ಷೇಮ ವಿಚಾರಿಸಿದರು.

# ಮಂದಗತಿಯಲ್ಲಿ ಕಾಮಗಾರಿ : ಸಂಚಾರಕ್ಕೆ ತೊಂದರೆ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಳೇಬೀಡು:ಹೊಯ್ಸಳೇಶ್ವರ ದೇವಾಲಯ ರಸ್ತೆ ಅಭಿವೃದ್ಧಿ ಕಾಮಗಾರಿ ಮಂದಗತಿಯಲ್ಲಿ ನಡೆಯುತ್ತಿದೆ, ರಸ್ತೆಗೆ ಜೆಲ್ಲಿ ಹರಡಿ ಹಲವು ದಿನ ಕಳೆದರು ಕಾಂಕ್ರೀಟ್ ಕೆಲಸ ಮಾಡದೆ ಇರುವುದರಿಂದ ಮಂಗಳವಾರ ಸರಕು ತುಂಬಿದ ಲಾರಿಯ ಹೂತು ಕೊಂಡಿತ್ತು.

ಚಾಲಕ ಜಾಗುರುಕನಾಗಿದ್ದರಿಂಧ ವಾಲಿದ ಸ್ಥಿತಿಯಲ್ಲಿ ಲಾರಿ ವಾಲಿದ ಸ್ಥಿತಿಯಲ್ಲಿ ನಿಂತು ಕಟ್ಟಡದ ಕಟ್ಟಡಕ್ಕೆ ಹಾನಿಯಾಗುವುದು ತಪ್ಪಿದೆ. ದಪ್ಪ ಜೆಲ್ಲಿ ಹರಡಿ ಹಲವು ದಿನ ಕಳೆದಿದೆ. ಆದರೆ ರೋಲ್ ಮಾಡುವ ಕೆಲಸ ನಡೆದಿಲ್ಲ. ಮಳೆ ಬಂದಿರುವುದರಿಂದ ಸಡಿಲ ಜೆಲ್ಲಿ ರಾಶಿಯಲ್ಲಿ ನೀರು ತುಂಬಿಕೊಡಿದ್ದರಿಂದ ಲಾರಿ ಚಕ್ರ ಹೂತು ಕೊಂಡಿದೆ ಎಂದು ಸ್ಥಳೀಯರು ದೂರಿದರು

ರಸ್ತೆ ಕಾಮಗಾರಿಯಲ್ಲಿ ಜೆಲ್ಲಿ ತುಂಬಿದ ಭಾಗದಲ್ಲಿ ಬ್ಯಾರಿಕೇಡ್ ಹಾಕಿ, ಬಾಣದ ಗುರುತಿನ ಫಲಕ ಹಾಕಿದ್ದರೆ, ಅಪಾಯ ಸಂಭವಿಸುತ್ತಿರಲಿಲ್ಲ. ಎಂಜಿನಿಯರ್ ಗಳು ಗಮನ ಹರಿಸಬೇಕು ಎಂದು ವರ್ತಕರ ಗೋಪಾಲ್ ಹೇಳಿದರು.

ಬಸ್ ನಿಲ್ದಾಣ ಮುಂಭಾಗ ಅಂಚೆ ಕಚೇರಿ ಪಕ್ಕದ ದ್ವಾರಸಮುದ್ರ ಕೆರೆ ರಸ್ತೆಯ ಒಂದು ಬದಿಗೆ ಜೆಲ್ಲಿ ಹರಡಿ ತಿಂಗಳು ಕಳೆದಿದೆ. ಅಲ್ಲಿಯೂ ಸಹ ಬಾಣದ ಗುರುತಿನ ಫಲಕ ಹಾಕದಿರುವುದರಿಂದ ಸರಕು ತುಂಬಿದ ಲಾರಿಯ ಚಾಲಕರು ಜೆಲ್ಲಿ ರಸ್ತೆಗೆ ಚಲಿಸಿ ಕಷ್ಟಪಟ್ಟು ಹಿಂದಿರುಗುವಂತಾಗಿದೆ ಎಂಬ ದೂರು ಕೇಳಿಬರುತ್ತಿದೆ.

ಕಾಂಕ್ರಿಟ್ ಕಾಮಗಾರಿ ನಡೆಯುತ್ತಿದ್ದಾಗ ವಾಹನ ಓಡಾಡದಂತೆ ಟೇಪ್ ಹಾಕಲಾಗಿತ್ತು. ಸಾಕಷ್ಟು ಮಂದಿ ಟೆಪ್ ಕಿತ್ತು ಕ್ವಿರಿಂಗ್ ಮಾಡುತ್ತಿದ್ದ ರಸ್ತೆಯಲ್ಲಿಯೇ ವಾಹನ ಓಡಾಡಿಸಿದರು. ಜಾತ್ರೆ ಪ್ರಯುಕ್ತ ಮತ್ತೊಂದು ಬದಿಗೆ ಜೆಲ್ಲಿ ಹಾಕಿಸಲಾಗಿದೆ. ಶೀಘ್ರದಲ್ಲೇ ಕಾಮಗಾರಿ ಆರಂಭಿಸಲಾಗುವುದು. ಕಾಮಗಾರಿ ಸ್ಥಳದಲ್ಲಿ ಬ್ಯಾರಾಕೇಡ್ ಹಾಗೂ ಫಲಕ ಹಾಕಲು ಗುತ್ತಿಗೆದಾರರಿಗೆ ಸೂಚಿಸಲಾಗುವುದು ಎಂದು ಎಇಇ ದಯಾನಂದ ತಿಳಿಸಿದರು.




ಜೆಲ್ಲಿ ಹರಡಿದ ಸ್ಥಳದಲ್ಲಿ ವಾಹನ ಚಲಿಸದಂತೆ ದಪ್ಪ ಕಲ್ಲು ಜೋಡಿಸಲಾಗಿತ್ತು. ಚಾಲಕರು ಕಲ್ಲು ತೆರವು ಮಾಡಿ ವಾಹನ ಚಾಲನೆ ಮಾಡುತ್ತಿದ್ದಾರೆ. ಜಾತ್ರೆ ಇದ್ದ ಕಾರಣ ಕೆಲಸ ನಿಲ್ಲಿಸಿದ್ದೆವು. ಎರಡು ದಿನದಲ್ಲಿ ಕೆಲಸ ಆರಂಭಿಸುತ್ತೇವೆ ಎಂದು ಗುತ್ತಿಗೆದಾರರು ಸಿಬ್ಬಂದಿ ಜಗದೀಶ್ ತಿಳಿಸಿದರು.

# ಬಿಜೆಪಿ ಬೆಂಬಲಿತ ಸದಸ್ಯೆ ರಾಜೀನಾಮೆಗೆ ಒತ್ತಾಯ



ಹಾಸನ: ಕಸಬಾ ವ್ಯಾಪ್ತಿಯ ತಣ್ಣೀರುಹಳ್ಳ ಪಿಎಸಿಸಿಎಸ್ ಚುನಾವಣೆಯಲ್ಲಿ ಬಿಜೆಪಿ ಬೆಂಬಲ ಹಾಗೂ ಮುಖಂಡರು, ಕಾರ್ಯಕರ್ತರ ಶ್ರಮದಿಂದ ಗೆದ್ದಿದ್ದ ನಿರ್ದೇಶಕಿ ಜಯಲಕ್ಷ್ಮಿ ಎಂಬುವರು ಅಧ್ಯಕ್ಷ-ಉಪಾಧ್ಯಕ್ಷ ಚುನಾವಣೆಯಲ್ಲಿ ಹಣದ ಆಮಿಷಕ್ಕೆ ಒಳಗಾಗಿ ಜೆಡಿಎಸ್ ಪರ ಮತ ಹಾಕಿದ್ದಾರೆ ಎಂದು ಬಿಜೆಪಿ ಯುವ ಮೋರ್ಚಾ ತಾಲೂಕು ಅಧ್ಯಕ್ಷ ಪ್ರದೀಪ್ ಆರೋಪಿಸಿದರು.

ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೈತಿಕತೆ ಇಲ್ಲದೆ ಹೊಸದಾಗಿ ಅಧ್ಯಕ್ಷರಾಗಿರುವ ಬಾಲಕೃಷ್ಣ ಅವರು ಒಡ್ಡಿರುವ ಹಣಬಲಕ್ಕೆ ಒಳಗಾಗಿ ಜೆಡಿಎಸ್ ಪರ ಮತ ಹಾಕಿರುವ ಜಯಲಕ್ಷ್ಮಿ ಕೂಡಲೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು. ಸೊಸೈಟಿ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನಕ್ಕೆ ಏ.9 ರಂದು ಚುನಾವಣೆ ನಡೆಯಿತು. ನಿರ್ದೇಶಕರ ಚುನಾವಣೆಯಲ್ಲಿ ಬಿಜೆಪಿ ಬೆಂಬಲದಿಂದ ಕ್ರಮಸಂಖ್ಯೆ 5 ರಲ್ಲಿ ಸ್ಪರ್ಧಿಸಿದ್ದ ಜಯಲಕ್ಷ್ಮಿ ಸೇರಿ 6 ಮಂದಿ ಗೆದ್ದಿದ್ದರು. ಜೆಡಿಎಸ್ ಬೆಂಬಲದಿಂದ ಐವರು ಗೆಲುವು ಸಾಧಿಸಿದ್ದರು. ಆದರೀಗ ತಮ್ಮ ನಿಷ್ಠೆ ಬದಲಿಸಿರುವುದು ಸರಿಯಲ್ಲ ಎಂದರು.

ಬಿಜೆಪಿಯ ನೂರಾರು ಕಾರ್ಯಕರ್ತರ ಶ್ರಮದಿಂದ ಗೆದ್ದು, ನಮ್ಮ ಪಕ್ಷಕ್ಕೆ ದ್ರೋಹ ಬಗೆದಿರುವ ಜಯಲಕ್ಷ್ಮಿ ಅವರು ಕೂಡಲೇ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡಬೇಕು ಎಂದು ಆಗ್ರಹಿಸಿದರು.

# ಇತಿಹಾಸದಲ್ಲಿ ಈ ದಿನ

## ಏಪ್ರಿಲ್ 24

### ಜಾಗತಿಕ

1. 1915 ಅರ್ಮೇನಿಯನ್ ಜನಸಂಹಾರ ಪ್ರಾರಂಭ: ಒಟ್ಟೊಮಾನಿಯ ಅರಸಟ್ರಾತ್ವದಲ್ಲಿ ಅರ್ಮೇನಿಯನ್ ಜನಾಂಗದವರನ್ನು ತಡೆಹಿಡಿಯಲು ಮತ್ತು ಹತ್ಯೆ ಮಾಡಲು ತೊಡಗಿದರು. ಇದನ್ನು ಇತಿಹಾಸದಲ್ಲಿ ಮೊದಲ ಸಮಗ್ರ ಜನಸಂಹಾರವೆಂದು ಕರೆಯಲಾಗುತ್ತದೆ.
2. 1990 ಹಬಲ್ ಬಾಹ್ಯಾಕಾಶ ದೂರದರ್ಶಕ ( ): ನಾಸಾ ಹಬಲ್ ದೂರದರ್ಶಕವನ್ನು ಬಾಹ್ಯಾಕಾಶಕ್ಕೆ ಯಶಸ್ವಿಯಾಗಿ ಉಡಾವಣೆ ಮಾಡಿತು, ಇದು ಜಾಗತಿಕ ಖಗೋಳ ಅಧ್ಯಯನಕ್ಕೆ ಹೊಸ ಯುಗವನ್ನು ನೀಡಿತು.

### ಭಾರತ

1. 1973 ಜನನ: ಭಾರತೀಯ ಕ್ರಿಕೆಟ್‌ನ ಮಹಾನ್ ಆಟಗಾರ ಸಚಿನ್ ತೆಂಡೂಲ್ಕರ್ ಅವರು ಈ ದಿನ ಮುಂಬೈನಲ್ಲಿ ಜನಿಸಿದರು.
2. 1957 ಮೊದಲ ಭಾರತೀಯ ಸಾಮಾನ್ಯ ಚುನಾವಣೆಯ ಫಲಿತಾಂಶ ಪ್ರಕಟ: ಎರಡನೇ ಭಾರತೀಯ ಲೋಕಸಭಾ ಚುನಾವಣೆಯ ಫಲಿತಾಂಶ ಪ್ರಕಟಗೊಂಡಿತು.

### ಇತರ

1800 ವಾಷಿಂಗ್ಟನ್ ಲೈಬ್ರರಿ ಸ್ಥಾಪನೆ: ಅಮೆರಿಕಾದ ಕಾಂಗ್ರೆಸ್ ಲೈಬ್ರರಿ () ಸ್ಥಾಪನೆಯಾಯಿತು, ಇದು ಇಂದು ವಿಶ್ವದ ಅತಿ ದೊಡ್ಡ ಗ್ರಂಥಾಲಯವಾಗಿದೆ.

# ಕರಿಯಮ್ಮ-ಮಲ್ಲಿಗೆಮ್ಮ ದೇವಿಯರ 56ನೇ ವರ್ಷದ ಜಾತ್ರಾ ಮಹೋತ್ಸವಕ್ಕೆ ಚಾಲನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ : ನಗರದ ಗ್ರಾಮ ದೇವತೆಗಳಾದ ಕರಿಯಮ್ಮ ಮತ್ತು ಮಲ್ಲಿಗೆಮ್ಮ ದೇವಿಯರ 56ನೇ ವರ್ಷದ ಜಾತ್ರಾ ಮಹೋತ್ಸವಕ್ಕೆ ಚಾಲನೆ ದೊರೆತಿದೆ.

ಸಂಪ್ರದಾಯದಂತೆ ಜಾತ್ರಾ ಮಹೋತ್ಸವಕ್ಕೂ ಮುನ್ನ ಗ್ರಾಮದ ಅಧಿದೇವತೆ ಕರಿಯಮ್ಮ ದೇವಿ ತನ್ನ ಭಕ್ತರ ಮನೆಯಲ್ಲಿ ಮುತ್ತೈದೆಯರಿಂದ ಮಡಿಲಕ್ಕಿ ತುಂಬಿಸಿಕೊಳ್ಳುವ ಸಂಪ್ರದಾಯ ಇಂದಿಗೂ ನಡೆಯುತ್ತಾ ಬಂದಿರುವುದು ಇಲ್ಲಿನ ವಿಶೇಷ.

ಮಡಿಲಕ್ಕಿಗಾಗಿ ಅಮ್ಮನವರು ಬರುತ್ತಾರೆ ಎಂಬ ಮಾಹಿತಿ ದೊರೆಯುತ್ತಿದಂತೆ ಭಕ್ತರು ತಮ್ಮ ಮನೆ ಮತ್ತು ಅಂಗಳವನ್ನು ಸ್ವಚ್ಛ ಮಾಡಿ ತಳಿರು ತೋರಣಗಳಿಂದ ಶೃಂಗರಿಸಿ ಗ್ರಾಮ ದೇವತೆ ಬರಮಾಡಿಕೊಂಡು ಮಡಿಲಕ್ಕಿ ತುಂಬಿ ಆರತಿ ಬೆಳಗಿ ಕರಿಯಮ್ಮ ದೇವಿಯ ಆಶೀರ್ವಾದ ಪಡೆದುಕೊಳ್ಳುತ್ತಾರೆ.

ಈ ಕುರಿತು ದೇವಾಲಯದ ಅಭಿವೃದ್ಧಿ ಸಮಿತಿ ಕಾರ್ಯದರ್ಶಿ ಕಿರಣ್ ಕುಮಾರ್ ಮಾತನಾಡಿ, ನಗರದ ಅಧಿದೇವತೆಗಳಾಗಿರುವ ಕರಿಯಮ್ಮ ಮತ್ತು ಮಲ್ಲಿಗೆ ಮಾದೇವಿಯರ ಜಾತ್ರಾ ಮಹೋತ್ಸವ ಪ್ರತಿ ವರ್ಷದಂತೆ ಈ ವರ್ಷವೂ ಸಂಪ್ರದಾಯದಂತೆ ಅದ್ದೂರಿಯಾಗಿ ನಡೆಸಲು ಈಗಾಗಲೇ ದೇವಾಲಯದ



ಅಭಿವೃದ್ಧಿ ಸಮಿತಿ ಸಕಲ ಸಿದ್ಧತೆಯಲ್ಲಿ ತೊಡಗಿದೆ.

ಮೇ 5 ರಿಂದ 8 ರವರೆಗೆ ನಾಲ್ಕು ದಿನಗಳ ಕಾಲ ನಡೆಯುವ ಈ ಜಾತ್ರಾ ಮಹೋತ್ಸವ ಪ್ರತಿದಿನವೂ ವಿಶೇಷತೆಯಿಂದ ಕೂಡಿರುತ್ತದೆ. ಮೇ 5 ಊರ ಒಳಗಿನ ಮಲ್ಲಿಗೆಮ್ಮ ದೇವಾಲಯದಲ್ಲಿ ಅಮ್ಮನವರ ಮೂಲ ವಿಗ್ರಹಕ್ಕೆ ರುದ್ರಾಭಿಷೇಕ ಸೇರದಂತೆ ಹಲವು ಅಭಿಷೇಕ, ಬಿಲ್ವಾರ್ಚನೆ ಸೇರಿದಂತೆ ವಿವಿಧ ಅರ್ಚನೆಗಳು ನಡೆಯಲಿವೆ.

ನಂತರ ಮಲ್ಲಿಗೆಮ್ಮ ಮತ್ತು ಚೆಲುವರಾಯಸ್ವಾಮಿ ಅವರಿಗೆ ಸಿಹಿ ನೈವೇದ್ಯವನ್ನು ಭಕ್ತರು ಸಮರ್ಪಿಸುತ್ತಾರೆ. ರಾತ್ರಿ ಮೂರು ಕಳಸ ಮಠದ ಸಿದ್ದರಾಮೇಶ್ವರ ಸ್ವಾಮಿ ಮತ್ತು ಕರಿಯಮ್ಮ ಹಾಗೂ ಮಲ್ಲಿಗೆಮ್ಮ ದೇವಿಯರ ಸಮ್ಮುಖದಲ್ಲಿ ಕೆಂಗಳು ಸಿದ್ದೇಶ್ವರ ಸ್ವಾಮಿಗೆ ನೂರೊಂದೆಡೆ ಸೇವೆ ನಡೆಯಲಿದೆ.

ಮಂಗಳವಾರ ರಾತ್ರಿ ಕರಿಯಮ್ಮ ದೇವಿ, ದೂತರಾಯ, ಕೆಂಚರಾಯಸ್ವಾಮಿ ಸಮೇತ ಕರಿಯಮ್ಮ ದೇವಿಯ ಮೂಲ ಸಂವಿಧಾನದಲ್ಲಿ ನೆಲೆಸಿರುವ ಪಂಚ ಮಾತೃಕೆಯರಿಗೆ ಶಾಖಾರ ನೈವೇದ್ಯ ನಡೆಯಲಿದ್ದು, ಇದಕ್ಕೂ ಮುನ್ನ ಹರಕೆ ಹೊತ್ತ ಸಾವಿರಾರು ಮಹಿಳೆಯರು ತಲೆಯ ಮೇಲೆ ಕಳಸ ಹೊತ್ತು ಮಲ್ಲಿಗೆಮ್ಮ ದೇವಾಲಯದಿಂದ ಕರಿಯಮ್ಮ ದೇವಾಲಯದವರೆಗೂ ಮೆರವಣಿಗೆಯಲ್ಲಿ ಸಾಗುವುದನ್ನು ನೋಡುವುದೇ ಕಣ್ಣಿಗೆ ಹಬ್ಬ ಎನಿಸುತ್ತದೆ ಎಂದರು.

ಮೇ 7 ರಂದು ನಗರದ ಭವಾನಿ ಶಂಕರ ದೇವಾಲಯದಲ್ಲಿ ಗ್ರಾಮದೇವತೆಯರ ಗಂಗಸ್ಥಾನ ನಡೆದ ಬಳಿಕ ಉತ್ಸವದೊಂದಿಗೆ ಮೂಲ ಸನ್ನಿಧಾನಕ್ಕೆ ಗ್ರಾಮ ದೇವತೆಗಳನ್ನು ಕರೆತರಲಾಗುತ್ತದೆ.

ಮೇ 8 ಗುರುವಾರ ಮಧ್ಯಾಹ್ನ ಗ್ರಾಮ ದೇವತೆಯರ ಮಹಾ ರಥೋತ್ಸವವು ಭಕ್ತಾದಿಗಳ ಸಮ್ಮುಖದಲ್ಲಿ ವೈಭವ ಪೂರಿತವಾಗಿ ಜರುಗಲಿದ್ದು, ಗ್ರಾಮ ದೇವತೆಗಳ ಈ ಜಾತ್ರಾ ಮಹೋತ್ಸವದಲ್ಲಿ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವ ಮೂಲಕ ಕರಿಯಮ್ಮ ಮತ್ತು ಮಲ್ಲಿಗೆಮ್ಮ ದೇವಿಯರ ಕೃಪೆಗೆ ಪಾತ್ರರಾಗುವಂತೆ ಮನವಿ ಮಾಡಿದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248